

# ಏನಿದು ಮಲ್ಟಿಪಲ್ ಸ್ಕ್ಲೆರೋಸಿಸ್?

ಬಹು ಅಂಗವೈಕಲ್ಯ (ಮಲ್ಟಿಪಲ್ ಸ್ಕ್ಲೆರೋಸಿಸ್) ಸಮಸ್ಯೆ ಯುವಜನರನ್ನೇ ಬಾಧಿಸುವುದು ಹೆಚ್ಚು. ಅದರಲ್ಲೂ ಹಾರ್ಮೋನಿನ ಏರಿಳಿತದಿಂದಾಗಿ ಮಹಿಳೆಯರಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮೆದುಳು ಮತ್ತು ನರಮಂಡಲಗಳಿಗೆ ವೈರಾಣು ತಗುಲಿ ಬಾಧಿಸುವುದರಿಂದ ಈ ಕಾಯಿಲೆ ವ್ಯಕ್ತಿಯನ್ನು ಅಕ್ಷರಶಃ ಹಾನಿಗೀಡು ಮಾಡುತ್ತದೆ. ಈ ಸಮಸ್ಯೆಗೂ ಉತ್ತಮ ಔಷಧಿಗಳಿವೆ. ಆದರೆ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ, ಕಾಳಜಿ ವಹಿಸಬೇಕಾದದ್ದು ಅತೀ ಅಗತ್ಯ.

■ **ಉಮಾ ಅನಂತ್**

ಬೆಂಗಳೂರಿನ ಹೊರವಲಯದಲ್ಲಿರುವ ವಿನುತಾಗೆ ಇಪ್ಪತ್ತೈದು ವರ್ಷ. ಕಾಲೇಜು ಮುಗಿಸಿ ಕಳೆದ ಮೂರು ವರ್ಷಗಳಿಂದ ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡುವ ಆಕೆಗೆ ಕಣ್ಣಿನ ಸಮಸ್ಯೆ ಎದುರಾಯಿತು. ಕಣ್ಣು ಮಂಜಾಗುವುದು, ದೃಷ್ಟಿಯಲ್ಲಿ ತೊಂದರೆ, ಎದುರು ಕಾಣುವ ಒಂದು ವಸ್ತು ಎರಡು ವಸ್ತುವಿನಂತೆ ಕಾಣುವುದು, ಕಾಲು ಜೋಮು ಹಿಡಿಯುವುದು, ವಿಪರೀತ ಸುಸ್ತು.. ಇತ್ಯಾದಿ ಸಮಸ್ಯೆ ಒಂದರ ಮೇಲೊಂದು ಕಾಣಿಸಿಕೊಳ್ಳಲಾರಂಭಿಸಿತು. ಕಚೇರಿಯಲ್ಲಿ ಸದಾ ಲವಲವಿಕೆಯಿಂದ ಓಡಾಡುತ್ತಿದ್ದ ವಿನುತಾಗೆ ಇದು ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.

ವೈದ್ಯರ ಬಳಿಗೆ ಹೋಗಿ ತಪಾಸಣೆ ಮಾಡಿಸಿದಾಗ ಈಕೆಗೆ ಮಲ್ಟಿಪಲ್ ಸ್ಕ್ಲೆರೋಸಿಸ್ (ಬಹು ಅಂಗವೈಕಲ್ಯ) ಸಮಸ್ಯೆ ಎಂಬುದು ಸಾಬೀತಾಯಿತು.

ಮಲ್ಟಿಪಲ್ ಸ್ಕ್ಲೆರೋಸಿಸ್ ಎಂದರೆ ಬಹು ಅಂಗವೈಕಲ್ಯ ಸಮಸ್ಯೆ ಎಂದರ್ಥ. ಅತ್ಯಂತ ವಿರಳ ಕಾಯಿಲೆಗಳಲ್ಲಿ ಇದೂ ಒಂದು. ಈ ಕಾಯಿಲೆಯಲ್ಲಿ ವ್ಯಕ್ತಿಯ ನರಮಂಡಲ ಹಾಗೂ ಮೆದುಳಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಆರೋಗ್ಯದ ಬಗ್ಗೆ ಸಾಕಷ್ಟು ಮುಂಜಾಗ್ರತೆ ವಹಿಸಿದರೆ ಈ ಅಪಾಯದಿಂದ ಪಾರಾಗಬಹುದು ಎಂಬುದು ವೈದ್ಯಕೀಯ ತಜ್ಞರ ಅಭಿಮತ.

ಬಹು ಅಂಗವೈಕಲ್ಯ ಕಾಯಿಲೆ 20ರಿಂದ 40 ವರ್ಷದೊಳಗಿನವರಲ್ಲಿ ಕಾಣಿಸಿಕೊಳ್ಳುವುದು ಹೆಚ್ಚು. ಜತೆಗೆ ಮಹಿಳೆಯರಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಪ್ರಮುಖ ಕಾರಣ ದೇಹದಲ್ಲಿ ರೋಗ

